# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1462 |
| ಸದಸ್ಯರ ಹೆಸರು | ಶ್ರೀ ಐವನ್ ಡಿ'ಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 17.03.2026 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಅಕ್ರಮ ಮರಳು ಸಾಗಾಣಿಕೆ ಪ್ರಕರಣಗಳು ದಾಖಲಾಗಿದೆ; ಸರ್ಕಾರದಿಂದ ಎಷ್ಟು ದಂಡ ವಸೂಲಿ ಮಾಡಲಾಗಿದೆ; (ವಿವರ ನೀಡುವುದು)</td><td rowspan="2">ಕಳೆದ ಮೂರು ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಮರಳು ಸಾಗಾಣಿಕೆಯಡಿ ಪತ್ತೆ ಹಚ್ಚಿದ ಪ್ರಕರಣಗಳು, ಸಂಗ್ರಹಿಸಲಾದ ದಂಡದ ಮೊತ್ತ ಮತ್ತು ದಾಖಲಿಸಲಾದ ಮೊಕದ್ದಮೆಗಳ ವರ್ಷವಾರು ವಿವರಗಳು ಈ ಕೆಳಕಂಡಂತಿವೆ:
<table>
<tr><th>ವರ್ಷ</th><th>ಪತ್ತೆಯಾದ ಒಟ್ಟು ಪ್ರಕರಣಗಳು</th><th>ದಂಡ (₹ ಲಕ್ಷ ಗಳಲ್ಲಿ)</th><th>ದಾಖಲಿಸಿರುವ FIR / PCR No.</th></tr>
<tr><td>2023-24</td><td>134</td><td>52.27</td><td>14</td></tr>
<tr><td>2024-25</td><td>96</td><td>28.29</td><td>39</td></tr>
<tr><td>2025-26 (ಫೆಬ್ರುವರಿ-2026 ರ ಅಂತ್ಯಕ್ಕೆ)</td><td>66</td><td>14.25</td><td>1</td></tr>
<tr><td>ಒಟ್ಟು</td><td>296</td><td>94.81</td><td>54</td></tr>
</table></td></tr>
<tr><td>ಆ)</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ರಮ ಮರಳು ಸಾಗಾಣಿಕೆಯಲ್ಲಿ ಎಷ್ಟು ಪ್ರಕರಣಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)</td></tr>
<tr><td>ಇ)</td><td>ಅಕ್ರಮ ಮರಳು ಸಾಗಾಣಿಕೆಯಲ್ಲಿ ಅಧಿಕಾರಿಗಳು ಶಾಮೀಲಾಗಿರುವ ವರದಿಯ ಪ್ರಕರಣಗಳೆಷ್ಟು; ಅವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)</td><td>• ಕಳೆದ 03 ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಅಕ್ರಮ ಮರಳು ಗಣಿಗಾರಿಕೆ/ ಸಾಗಾಣಿಕೆ ಪ್ರಕರಣದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಇಬ್ಬರು (02) ಅಧಿಕಾರಿಗಳು (ಶ್ರೀ ಬಿ.ಎಂ. ಲಿಂಗರಾಜು, ಉಪನಿರ್ದೇಶಕರು ಮತ್ತು ಶ್ರೀಮತಿ ಸುಷ್ಮಾ ಶಶಿ, ಭೂವಿಜ್ಞಾನಿ) ಶಾಮೀಲಾಗಿರುವ ಬಗ್ಗೆ ವರದಿಯಾಗಿದ್ದು, ಶಿಸ್ತು ಕ್ರಮ ಕೈಗೊಳ್ಳುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.<br><br>• ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆಯನ್ನು ನಿಯಂತ್ರಿಸಲು ಕ್ರಮ ವಹಿಸದಿರುವ ಬಗ್ಗೆ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರ ಶಿಫಾರಸ್ಸಿನಂತೆ ಶ್ರೀಮತಿ ಕೃಷ್ಣವೇಣಿ, ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರನ್ನು ದಿನಾಂಕ: 21-06-2025 ರಲ್ಲಿ ಅಮಾನತುಗೊಳಿಸಲಾಗಿದೆ.</td></tr>
</table>

ಸಂಖ್ಯೆ:ಸಿಐ-ಎಂಎಂಎನ್/129/2026

(ಎಸ್.ಎಸ್.ಮಲ್ಲಿಕಾರ್ಜುನ)
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.